# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

'ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿ ಹಬ್ಬದ ವರ್ಷಾಚರಣೆ' ಜೂನ್ – 2021 ರಿಂದ ಜೂನ್ – 2022 ರವರೆಗೆ

ದಿನಾಂಕ: 02–02–2022 ರಂದು ಅಪರಾಹ್ನ 3:00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ರಾಜಣ್ಣ .ಆರ್.**<br>ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಪ್ರೊ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಪ್ರೊ. ರಾಜಣ್ಣ .ಆರ್.**<br>ಕುಲಸಚಿವರು (ಪರೀಕ್ಷಾಂಗ)<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>**CIQA ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ.- ಹೆಚ್. ರಾಜೇಶ್ವರಿ**<br>**ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)**<br>ಕರಾಮುವಿ, ಮೈಸೂರು. |
| **ಸಭೆಗೆ ಗೈರುಹಾಜರಾದ ಸದಸ್ಯರು** | |
| **ಡಾ. ಲಕ್ಷ್ಮಿ .ಎನ್.**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಸಚಿವರು ಮಾತನಾಡುತ್ತಾ, 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ವಿಶೇಷಾಧಿಕಾರಿಗಳು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

ಕುಲಸಚಿವರು | ಕುಲಪತಿಗಳು

**ವಿಷಯ ಸಂಖ್ಯೆ: 20.01**

**ವಿಷಯ** : ಸಮಾಜಕಾರ್ಯ ವಿಷಯದ (BSW and MSW) UG and PG ಶಿಕ್ಷಣಕ್ರಮಗಳ ಪಠ್ಯಕ್ರಮ ಮತ್ತು PPR ಗಳನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಸಮಾಜಕಾರ್ಯ ವಿಷಯದ (BSW and MSW) UG and PG ಶಿಕ್ಷಣಕ್ರಮಗಳನ್ನು ಪ್ರಾರಂಭಿಸುವ ಸಲುವಾಗಿ ರಚಿತವಾಗಿರುವ Composite ಅಧ್ಯಯನ ಮಂಡಳಿಯ ಸಭೆಯನ್ನು ನಡೆಸಿ, ಸದರಿ ಶಿಕ್ಷಣಕ್ರಮಗಳ ಪಠ್ಯಕ್ರಮ ಮತ್ತು PPR ಗಳನ್ನು ಸಿದ್ಧಪಡಿಸಿ, ನಡಾವಳಿಯೊಂದಿಗೆ, ಅಧ್ಯಕ್ಷರು, ಸಮಾಜಕಾರ್ಯ ವಿಷಯದ ಅಧ್ಯಯನ ಮಂಡಳಿ, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರು ಸಲ್ಲಿಸಿರುತ್ತಾರೆ.

ಈ ಶಿಕ್ಷಣಕ್ರಮಗಳಿಗೆ ಯುಜಿಸಿಯಿಂದ ಮಾನ್ಯತೆ ಪಡೆಯುವ ಸಂಬಂಧ, UGC-DEB Portal ಗೆ upload ಮಾಡಬೇಕಾಗಿರುತ್ತದೆ. ಈ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**BSW and MSW UG and PG** ಶಿಕ್ಷಣಕ್ರಮಗಳ ಪಠ್ಯಕ್ರಮ, ಸಿದ್ಧಪಾಠ ಮತ್ತು **PPR** ಗಳನ್ನು ಅನುಮೋದಿಸಲಾಯಿತು. ಯುಜಿಸಿಯಿಂದ ಸದರಿ ಕಾರ್ಯಕ್ರಮಗಳಿಗೆ ಅನುಮತಿ ದೊರೆತ ನಂತರ ವಿಶ್ವವಿದ್ಯಾನಿಲಯದಲ್ಲಿ ಸದರಿ ಕಾರ್ಯಕ್ರಮಗಳನ್ನು ಆರಂಭಿಸಲು ತೀರ್ಮಾನಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.02

ವಿಷಯ : ಸಮೀಕರಣ ಸಮಿತಿ (Equivalence Committee) ಸಭೆಯ ತೀರ್ಮಾನದ ನಡಾವಳಿಯನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿಗೆ ಬಾಹ್ಯ ವಿಶ್ವವಿದ್ಯಾನಿಲಯಗಳಿಂದ ಬರುವ ವಿದ್ಯಾರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆ ಹಾಗು ಇನ್ನಿತರೆ ವಿಷಯಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸುವ ಕುರಿತು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ, ಇತರೆ ಶಾಸನಬದ್ಧ ಅಧಿಕಾರಿಗಳನ್ನು ಒಳಗೊಂಡಂತೆ ಖಾಯಂ ಸಮೀಕರಣ ಸಮಿತಿ (Equivalence Committee) ಯನ್ನು ರಚಿಸಿ (ವಿ.ವಿ. ಅಧಿಸೂಚನೆ ಸಂಖ್ಯೆ: ಕರಾಮುವಿ/ಡೀನ್(ಶೈ)/01/2020-21, ದಿನಾಂಕ: 19-11-2020) ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಸದರಿ ಸಮೀಕರಣ ಸಮಿತಿಯು 2021-22ರ ಜುಲೈ (ನವೆಂಬರ್) ಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಬಯಸಿದ್ದ ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಹತೆ ಸಂಬಂಧದಲ್ಲಿ ಗೊಂದಲ ಉಂಟಾಗಿದ್ದ ಪ್ರಕರಣಗಳಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲಾತಿಗಳನ್ನು ಸಮೀಕರಣ ಸಮಿತಿಯ ಮುಂದೆ ದಿನಾಂಕ : 07-12-2021 ರಂದು ಸಭೆಗೆ ಮಂಡಿಸಲಾಗಿತ್ತು.

ಸಮೀಕರಣ ಸಮಿತಿಯು ಸಭೆಯಲ್ಲಿ ಒಟ್ಟು 11 ಪ್ರಕರಣಗಳನ್ನು ಪರಿಶೀಲಿಸಿ, ಅವುಗಳಿಗೆ ಸಂಬಂಧಿಸಿದಂತೆ ತೀರ್ಮಾನಗಳನ್ನು ತೆಗೆದುಕೊಂಡಿರುತ್ತದೆ. ಸದರಿ ನಡಾವಳಿಯಲ್ಲಿನ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

**ದಿನಾಂಕ : 07-12-2021 ರ ಸಮೀಕರಣ ಸಮಿತಿ (Equivalence Committee) ಸಭೆಯ ತೀರ್ಮಾನದ ನಡಾವಳಿಯನ್ನು ಅನುಮೋದಿಸಲಾಯಿತು.**

ಕುಲಸಚಿವರು ಕುಲಪತಿಗಳು

## ವಿಷಯ ಸಂಖ್ಯೆ: 20.03

ವಿಷಯ : ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14-12-2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ, **ಡಾ.ಶಂಕರನಾರಾಯಣಪ್ಪ,** ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಟಿಯಿಂದ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ.ಎನ್.ಆನಂದಗೌಡ** ಇವರನ್ನು **ದಿನಾಂಕ:15.11.2021 ರಿಂದ** ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

ತೀರ್ಮಾನ :

**ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಡಾ.ಶಂಕರನಾರಾಯಣಪ್ಪ, ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಟಿಯಿಂದ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಎನ್.ಆನಂದಗೌಡ ಇವರನ್ನು ದಿನಾಂಕ:15.11.2021 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.04

**ವಿಷಯ :** ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.
**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14-12-2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ, **ಡಾ.ರಮಾನಂದ ಎಂ.ಎಸ್** ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ.ಪವಿತ್ರ ಆರ್.ಹೆಚ್.** ಇವರನ್ನು **ದಿನಾಂಕ:15.11.2021 ರಿಂದ** ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

ತೀರ್ಮಾನ:

**ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಡಾ.ರಮಾನಂದ ಎಂ.ಎಸ್ ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಪವಿತ್ರ ಆರ್.ಹೆಚ್. ಇವರನ್ನು ದಿನಾಂಕ:15.11.2021 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

ಕುಲಸಚಿವರು                                                                                   ಕುಲಪತಿಗಳು

## ವಿಷಯ ಸಂಖ್ಯೆ: 20.05

**ವಿಷಯ** : ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಮುಂಬರುವ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ PG Diploma in Women Studies ಶಿಕ್ಷಣಕ್ರಮದ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ PG Diploma in Women Studies ಶಿಕ್ಷಣಕ್ರಮದ ಪಠ್ಯಕ್ರಮವನ್ನು ಪ್ರಾರಂಭಿಸುವ ಸಲುವಾಗಿ ರಚಿತವಾಗಿರುವ ಅಧ್ಯಯನ ಮಂಡಳಿಯ ಸಭೆಯನ್ನು ನಡೆಸಿ, ಸದರಿ ಶಿಕ್ಷಣಕ್ರಮದ ಪ್ರಥಮ, ದ್ವಿತೀಯ, ತೃತೀಯ ಮತ್ತು ಅಂತಿಮ ಸೆಮಿಸ್ಟರ್‌ಗಳ (ಸಿಬಿಸಿಎಸ್ ಮೋಡ್) ನಲ್ಲಿ ಪಠ್ಯಕ್ರಮಗಳನ್ನು ಸಿದ್ಧಪಡಿಸಿ, ನಡಾವಳಿಯೊಂದಿಗೆ, ಸಂಯೋಜನಾಧಿಕಾರಿ, ಮಹಿಳಾ ಅಧ್ಯಯನ ಕೇಂದ್ರ, ಕರಾಮುವಿ, ಮೈಸೂರು ಇವರು ಸಲ್ಲಿಸಿರುತ್ತಾರೆ.

ಈ ಶಿಕ್ಷಣಕ್ರಮವನ್ನು ವಿಶ್ವವಿದ್ಯಾನಿಲಯವು ಮುಂಬರುವ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ :**

ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಮುಂಬರುವ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ **PG Diploma in Women Studies** ಶಿಕ್ಷಣಕ್ರಮದ ಪಠ್ಯಕ್ರಮವನ್ನು ಗಮನಿಸಲಾಯಿತು. ಸದರಿ ಕಾರ್ಯಕ್ರಮವು ಎರಡು ವರ್ಷದ ಅವಧಿಯದಾಗಿದ್ದು, **80 Credits** ಹೊಂದಿರುವುದನ್ನು ಗಮನಿಸಲಾಯಿತು. ಸದರಿ ಕಾರ್ಯಕ್ರಮವನ್ನು ಎಂ.ಎ ಮಹಿಳಾ ಅಧ್ಯಯನ ಎಂದು ಪರಿಗಣಿಸಬಹುದೆಂದು ಮಹಿಳಾ ಅಧ್ಯಯನ ಮಂಡಳಿ ಸಭೆ ಶಿಫಾರಸ್ಸು ಮಾಡಿರುವುದನ್ನು ಗಮನಿಸಲಾಯಿತು.

**ತೀರ್ಮಾನ :**

ಕರಾಮುವಿಯಲ್ಲಿ ಎಂ.ಎ ಮಹಿಳಾ ಅಧ್ಯಯನವನ್ನು ಆರಂಭಿಸಲು ಅನುಮೋದಿಸಲಾಯಿತು. ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ **PPR**, ಪಠ್ಯಕ್ರಮ ಮತ್ತು ಸಿದ್ಧಪಾಠಗಳನ್ನು ಅನುಮೋದಿಸಲಾಯಿತು. ಯುಜಿಸಿಯಿಂದ ಸದರಿ ಕಾರ್ಯಕ್ರಮಕ್ಕೆ ಅನುಮತಿ ದೊರೆತ ನಂತರ ವಿಶ್ವವಿದ್ಯಾನಿಲಯದಲ್ಲಿ ಸದರಿ ಕಾರ್ಯಕ್ರಮಗಳನ್ನು ಆರಂಭಿಸಲು ತೀರ್ಮಾನಿಸಲಾಯಿತು. ಇದರೊಂದಿಗೆ ಒಂದು ವರ್ಷದ ಮಹಿಳಾ ಅಧ್ಯಯನ **PG Certificate** ಕಾರ್ಯಕ್ರಮ ಆರಂಭಿಸಲು ತೀರ್ಮಾನಿಸಲಾಯಿತು. ಹಾಗೂ ಒಂದು ವರ್ಷದ ಮಹಿಳಾ ಅಧ್ಯಯನ **PG Certificate** ಪೂರ್ಣಗೊಳಿಸಿದವರಿಗೆ ಎರಡನೇ ವರ್ಷದ **MA in Women Studies** ಗೆ ನೇರ ಪ್ರವೇಶಾತಿ ನೀಡಲು **(Lateral Entry)** ತೀರ್ಮಾನಿಸಲಾಯಿತು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 20.06**

**ವಿಷಯ :** ವಿಶ್ವವಿದ್ಯಾನಿಲಯದಲ್ಲಿ ಮಾನವ ನೈತಿಕ ಸಮಿತಿಯನ್ನು ರಚಿಸಿರುವ ಬಗ್ಗೆ.

**ಉಲ್ಲೇಖ:** ಕರಾಮುವಿ/ಡೀನ್(ಶೈ)–07/2021–22, ದಿನಾಂಕ:29.12.2021

****

ICMR ಮಾರ್ಗಸೂಚಿಯನ್ವಯ Human Ethical Committee ಯು ಎಲ್ಲಾ ವಿ.ವಿಗಳಲ್ಲಿಯು ಕಡ್ಡಾಯವಾಗಿದ್ದು, ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಮಾನವ ನೈತಿಕ ವಿಷಯಗಳಿಗೆ ಸಂಬಂಧಿಸಿದಂತೆ ಸದರಿ ಸಮಿತಿಯ ಅವಶ್ಯಕತೆಯಿದ್ದು, ಕರಾಮುವಿಯಲ್ಲಿ ಇದನ್ನು ಉಲ್ಲೇಖಿತ ಆದೇಶದಂತೆ ರಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಸದರಿ ಸಮಿತಿ ಸದಸ್ಯರುಗಳಿಗೆ ಉಲ್ಲೇಖಿತ ಆದೇಶದಲ್ಲಿ ನಿಗದಿಪಡಿಸಲಾಗಿರುವ ಸಭಾ ಭತ್ಯೆ 1000/– ಪ್ರತಿ ದಿನಕ್ಕೆ, ಸ್ಥಳೀಯ ಭತ್ಯೆ 300/– ಹಾಗು ಉಪಹಾರ ಭತ್ಯೆ ಪ್ರತಿ ಸದಸ್ಯರಿಗೆ ರೂ. 200/– ಗಳಂತೆ ಭತ್ಯೆಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ವಿಷಯಕ್ಕೆ ಶೈಕ್ಷಣಿಕ ಮಂಡಳಿ, ಹಣಕಾಸು ಸಮಿತಿ ಮತ್ತು ವ್ಯವಸ್ಥಾಪನ ಮಂಡಳಿ ಸಭೆಗೆ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ICMR ಮಾರ್ಗಸೂಚಿಯನ್ವಯ Human Ethical Committee ರಚಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು. ಸದರಿ ಸಮಿತಿಗೆ ಕರಾಮುವಿ/ಡೀನ್(ಶೈ)–07/2021–22, ದಿನಾಂಕ:29.12.2021 ರ ಉಲ್ಲೇಖದಂತೆ ನಿಗದಿಪಡಿಸಲಾಗಿರುವ ಸಭಾ ಭತ್ಯೆ 1000/– ಪ್ರತಿ ದಿನಕ್ಕೆ, ಸ್ಥಳೀಯ ಭತ್ಯೆ 300/– ಹಾಗು ಉಪಹಾರ ಭತ್ಯೆ ಪ್ರತಿ ಸದಸ್ಯರಿಗೆ ರೂ. 200/– ಗಳಂತೆ ಭತ್ಯೆಗಳನ್ನು ಪಾವತಿಸಲು ಅನುಮತಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 20.07

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ Language Laboratory ಘಟಕ ಸ್ಥಾಪನೆ ಮತ್ತು ಸಂಯೋಜನಾಧಿಕಾರಿಯನ್ನು ನೇಮಿಸಿರುವುದರ ಕುರಿತು ಶೈಕ್ಷಣಿಕ ಮಂಡಳಿಯಲ್ಲಿ ಅನುಸಮರ್ಥನೆ ಪಡೆಯುವ ಬಗ್ಗೆ.

**ಉಲ್ಲೇಖ:** ಸಂಖ್ಯೆ: ಕರಾಮುವಿ/NAAC Criteria-3/2021-22, ದಿನಾಂಕ: 13.12.2021.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ NAAC ಮಾನ್ಯತೆಯನ್ನು ಪಡೆಯುವ ನಿಟ್ಟಿನಲ್ಲಿ ನೂತನವಾಗಿ Language Laboratory ಘಟಕವನ್ನು ಸ್ಥಾಪನೆ ಮಾಡಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಮೇರೆಗೆ ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಪ್ರೊ. ಎಂ. ರಾಮನಾಥಂ ನಾಯ್ಡು, ಅಧ್ಯಕ್ಷರು, ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ವಿಭಾಗದ ನಿರ್ವಹಣೆಯ ಜೊತೆಗೆ ಹೆಚ್ಚುವರಿಯಾಗಿ Language Laboratory ಘಟಕಕ್ಕೆ ಸಂಯೋಜನಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಮೇಲ್ಕಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸುತ್ತಾ, ಸದರಿ ಘಟಕಕ್ಕೆ ದಿನಾಂಕ:15.12.2021 ರಂದು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಯೋಜನಾಧಿಕಾರಿಯನ್ನು ನೇಮಿಸಿರುವುದನ್ನು ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

ವಿಶ್ವವಿದ್ಯಾನಿಲಯದಲ್ಲಿ **Language Laboratory** ಘಟಕ ಸ್ಥಾಪನೆ ಮತ್ತು ಸಂಯೋಜನಾಧಿಕಾರಿಯನ್ನು ನೇಮಿಸಿರುವುದಕ್ಕೆ ಶೈಕ್ಷಣಿಕ ಮಂಡಳಿಯಲ್ಲಿ ಅನುಸಮರ್ಥನೆ ನೀಡಲಾಯಿತು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 20.08**

**ವಿಷಯ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Vision ಹಾಗೂ Mission. ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-6 ರ 6.1.1 Governance in accordance with Mission and Vision ರಲ್ಲಿ ತಿಳಿಸಿರುವಂತೆ ಶಾಸನಬದ್ಧ ಸಭೆಗಳಲ್ಲಿ ಅನುಮೋದನೆ ಗೊಂಡಿರುವ Vision ಹಾಗೂ Mission. ನ ಅವಶ್ಯಕತೆ ಇರುತ್ತದೆ.

ಈ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ದಾಖಲೆಗಳಲ್ಲಿ ಸರ್ವತ್ರಯವಾಗಿ ಅನ್ವಯವಾಗುವಂತಹ ಏಕರೂಪದ Vision ಹಾಗೂ Mission ಅನ್ನು ಸಿದ್ದಪಡಿಸವ ನಿಟ್ಟಿನಲ್ಲಿ ವಿವಿಯ ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಡೀನ್ (ಅಧ್ಯಯನ ಕೇಂದ್ರ), NAAC ಉನ್ನತ ಮಟ್ಟದ ಸದಸ್ಯರು, CIQA ಸಮಿತಿಯ ಸದಸ್ಯರುಗಳು, ಅಧ್ಯಕ್ಷರು, ತೆಲಗು ಅಧ್ಯಯನ ವಿಭಾಗ ಹಾಗೂ ಕಾರ್ಯಪಾಲಕ ಅಭಿಯಂತರರು, ಇವರುಗಳನ್ನೊಳಗೊಂಡ ತಜ್ಞರ ಸಮಿತಿಯು ದಿನಾಂಕ: 13.12.2021 ರಂದು ಸಭೆ ಸೇರಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಏಕರೂಪದ Vision ಹಾಗೂ Mission. ನ ಕರಡನ್ನು ಸಿದ್ದಪಡಿಸಿ ದಿನಾಂಕ: 16.12.2021 ರಂದು ನಡೆದ ಸಭೆಯಲ್ಲಿ ಕರಡನ್ನು ಅಂತಿಮಗೊಳಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ದಾಖಲೆಗಳಲ್ಲಿ ಸರ್ವತ್ರಯವಾಗಿ ಅನ್ವಯವಾಗುವಂತಹ ಏಕರೂಪದ Vision ಹಾಗೂ Mission ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ Vision ಹಾಗೂ Mission. ಗೆ ಸಂಬಂಧಿಸಿದಂತೆ ತಜ್ಞರ ಸಮಿತಿಯು ದಿನಾಂಕ: 13.12.2021 ರಂದು ಸಭೆ ಸೇರಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಏಕರೂಪದ Vision ಹಾಗೂ Mission. ನ ಕರಡನ್ನು ಸಿದ್ದಪಡಿಸಿ ದಿನಾಂಕ: 16.12.2021 ರಂದು ನಡೆದ ಸಭೆಯಲ್ಲಿ ಅಂತಿಮಗೊಳಿಸಿರುವ ಕರಡನ್ನು ಯಥವತ್ತಾಗಿ ಸಭೆಯು ಅನುಮೋದಿಸಿತು.**

ಕುಲಸಚಿವರು | ಕುಲಪತಿಗಳು

## ವಿಷಯ ಸಂಖ್ಯೆ: 20.09

**ವಿಷಯ** : ವಿಶ್ವವಿದ್ಯಾನಿಲಯದ ಮಟ್ಟದಲ್ಲಿ DAIP, IAIP ಹಾಗೂ Editorial Committee ಸದಸ್ಯರುಗಳಿಗೆ ಭತ್ಯೆಗಳ ನಿಗದಿ ಬಗೆಗೆ

****

ವಿಶ್ವವಿದ್ಯಾನಿಲಯದಲ್ಲಿ ಸಿದ್ಧಪಾಠಗಳ Similarity Test ಮಾಡಿಸಿ ಹಾಗೂ Plagiarism Check Report ಅನ್ನು Editorial Committee ಯಲ್ಲಿ ಮಂಡಿಸಿ ಅನುಮೋದಿಸಲು ಸಲುವಾಗಿ Editorial Committee ಅನ್ನು ರಚಿಸಲು ಹಾಗೂ KSOU (Promotion of Academic Integrity and Prevention of Plagiarism) Guidelines – 2021 ಇದರಂತೆ Department Academic Integrity Panel (DAIP), ರಚಿಸಲು ವಿ.ವಿ.ಯ ಎಲ್ಲಾ ವಿಭಾಗಗಳು ಕ್ರಮವಹಿಸುತ್ತಿದ್ದು, ಹಾಗೂ Institutional Academic Integrity Panel (IAIP) ಸಮಿತಿಯನ್ನು ರಚಿಸಬೇಕಿದ್ದು, ಸದರಿ ಸಮಿತಿಯ ಬಾಹ್ಯ ಮತ್ತು ಆಂತರಿಕ ತಜ್ಞರುಗಳಿಗೆ ದಿನ ಭತ್ಯೆ, ಸಭಾ ಭತ್ಯೆ, ಪ್ರಯಾಣ ಭತ್ಯೆ ಹಾಗೂ ಇನ್ನಿತರೆ ಭತ್ಯೆಗಳನ್ನು ನೀಡಲು ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆಯಲಾಗಿದೆ.

ಈ ಹಿಂದೆ **ಸಂಖ್ಯೆ:ಕರಾಮುವಿ/ಡೀನ್(ಶೈ)–07/2021–22, ದಿನಾಂಕ:28/10/2021** ರ ಪರಿಷ್ಕೃತ ಕಛೇರಿ ಆದೇಶದ ಪ್ರಕಾರ ಅಧ್ಯಯನ ಮಂಡಳಿ ಸದಸ್ಯರಿಗೆ ದಿನ ಭತ್ಯೆಗೆ ರೂ.700/–, ಸಭಾ ಭತ್ಯೆಗೆ ರೂ.700/–, ಪ್ರಯಾಣ ಭತ್ಯೆಗೆ ರೂ. 6/– ಪ್ರತಿ ಕೀ.ಮಿ., ಉಪಹಾರ ಭತ್ಯೆಗೆ ರೂ.200/–/head ಎಂದು ದರ ನಿಗದಿಪಡಿಸಲಾಗಿರುತ್ತದೆ. ಹಾಗೂ **ಅಧಿಸೂಚನೆ ಸಂಖ್ಯೆ:ಕರಾಮುವಿ/ಡಿಎಸಿ–03/2018–19, ದಿನಾಂಕ:22.05.2018** ರ ಪ್ರಕಾರ Editorial Committee ಯ ಬಾಹ್ಯ ಸದಸ್ಯರಿಗೆ ಪ್ರತಿ ಬ್ಲಾಕ್‌ಗೆ ರೂ. 1000/– ದಂತೆ ನಿಗದಿಯಾಗಿತ್ತು.

ಪ್ರಸ್ತುತ, DAIP, IAIP ಹಾಗೂ Editorial Committee ಯ ಬಾಹ್ಯ ತಜ್ಞರಿಗೆ ಸಭಾ ಭತ್ಯೆ ರೂ. 3,000/–, ಪ್ರಯಾಣ ಭತ್ಯೆಗೆ ರೂ. 6/– ಪ್ರತಿ ಕೀ.ಮಿ., ದಿನ ಭತ್ಯೆಗೆ ರೂ.700/–, ಹಾಗೂ ಆಂತರಿಕ ತಜ್ಞರಿಗೆ ಸಭಾ ಭತ್ಯೆ ರೂ. 1,000/– ಮತ್ತು ಎಲ್ಲಾ ಸದಸ್ಯರಿಗೆ ಉಪಹಾರ ಭತ್ಯೆ ರೂ.200/–/head ರಂತೆ ದರ ನಿಗದಿಪಡಿಸಲು ಪ್ರಸ್ತಾವನೆಯನ್ನು ಮಂಡಿಸಿ ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**ವಿಶ್ವವಿದ್ಯಾನಿಲಯದ ಮಟ್ಟದಲ್ಲಿ DAIP, IAIP ಹಾಗೂ Editorial Committee ಯ ಬಾಹ್ಯ ತಜ್ಞರಿಗೆ ಸಭಾ ಭತ್ಯೆ ರೂ. 3,000/–, ಪ್ರಯಾಣ ಭತ್ಯೆಗೆ ರೂ. 6/– ಪ್ರತಿ ಕೀ.ಮಿ., ದಿನ ಭತ್ಯೆಗೆ ರೂ.700/–, ಹಾಗೂ ಆಂತರಿಕ ತಜ್ಞರಿಗೆ ಸಭಾ ಭತ್ಯೆ ರೂ. 1,000/– ಮತ್ತು ಎಲ್ಲಾ ಸದಸ್ಯರಿಗೆ ಉಪಹಾರ ಭತ್ಯೆ ರೂ.200/–/head ರಂತೆ ಪಾವತಿಸಲು ಸಭೆಯು ಅನುಮೋದಿಸಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.10

ವಿಷಯ: UGC, ODL and OL ನಿಯಮಾವಳಿ 2020 ರಂತೆ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS)ನ ಸ್ನಾತಕ, ಸ್ನಾತಕೋತ್ತರ ವಿಭಾಗಗಳ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ UGC, ODL and OL ನಿಯಮಾವಳಿ 2020 ರಂತೆ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS)ಯ ಪಠ್ಯಕ್ರಮಗಳನ್ನು 2021 ಜುಲೈ ಆವರ್ತನಕ್ಕೆ ಅಳವಡಿಸಿಕೊಳ್ಳುವ ಸಂಬಂಧ ಬಿಎಸ್ಸಿ (ಸಾಮಾನ್ಯ) ರಸಾಯನಶಾಸ್ತ್ರ, ಗಣಿತ, ಪ್ರಾಣಿಶಾಸ್ತ್ರ, ಗಣಕ ವಿಜ್ಞಾನ, ಹಾಗು ಬಿ.ಸಿ.ಎ, ಎಂಎಸ್ಸಿ ಗಣಿತ, ಎಂಎಸ್ಸಿ ಪ್ರಾಣಿಶಾಸ್ತ್ರ ಮತ್ತು ಬಿಎಸ್ಸಿ ಐ.ಟಿ ವಿಷಯಗಳ ಅಧ್ಯಯನ ಸಾಮಾಗ್ರಿ ಬರವಣಿಗೆಗೆ ಈಗಾಗಲೇ ಡೀನ್ (ಶೈಕ್ಷಣಿಕ) ವಿಭಾಗದಿಂದ ಬರವಣಿಗೆಗೆ ಆದೇಶಗಳನ್ನು ನೀಡಲಾಗಿರುತ್ತದೆ.

ಪಠ್ಯಕ್ರಮಗಳಿಗೆ ಶೈಕ್ಷಣಿಕ ಮಂಡಳಿಯ ಅನುಮೋದನೆ ಕಾಯ್ದಿರಿಸಿ ಬರವಣಿಗೆ ಆದೇಶಗಳನ್ನು ನೀಡಲಾಗಿರುವುದರಿಂದ ಸದರಿ ವಿಭಾಗಗಳ ಪಠ್ಯಕ್ರಮಗಳಿಗೆ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಿದೆ. ಹಾಗೂ ಬಿ.ಎಸ್ಸಿ (ಸಾಮಾನ್ಯ) ಜೀವ ರಸಾಯನಶಾಸ್ತ್ರ, ಪರಿಸರ ವಿಜ್ಞಾನ, ಪಠ್ಯಕ್ರಮಗಳಿಗೆ ಶೈಕ್ಷಣಿಕ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

ಬಿಎಸ್ಸಿ (ಸಾಮಾನ್ಯ) ರಸಾಯನಶಾಸ್ತ್ರ, ಜೀವ ರಸಾಯನಶಾಸ್ತ್ರ, ಪರಿಸರ ವಿಜ್ಞಾನ, ಗಣಿತ, ಪ್ರಾಣಿಶಾಸ್ತ್ರ, ಗಣಕ ವಿಜ್ಞಾನ, ಹಾಗು ಬಿ.ಸಿ.ಎ, ಎಂಎಸ್ಸಿ ಗಣಿತ, ಎಂಎಸ್ಸಿ ಪ್ರಾಣಿಶಾಸ್ತ್ರ ಮತ್ತು ಬಿಎಸ್ಸಿ ಐ.ಟಿ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮವನ್ನು ಅನುಮೋದಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.11

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನಡೆಸುವ ಬಗ್ಗೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯ ಪ್ರಾಯೋಗಿಕ ಹಾಗೂ ಸೈದ್ಧಾಂತಿಕ ತರಬೇತಿಯನ್ನು ಕರ್ನಾಟಕದ ವಿವಿಧ ಭಾಗಗಳಲ್ಲಿ ಮೈಸೂರು, ಬೆಂಗಳೂರು, ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಉಡುಪಿ ಕೇಂದ್ರಗಳಲ್ಲಿ 2022 ರ ಫೆಬ್ರುವರಿ, ಮಾರ್ಚ್, ಏಪ್ರಿಲ್, ಮತ್ತು ಮೇ ಮಾಹೆಗಳಲ್ಲಿ ಹಂತ ಹಂತವಾಗಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

| ಕ್ರ ಸಂ | ಶೈಕ್ಷಣಿಕ ವರ್ಷ | ತರಬೇತಿ | ದಿನಾಂಕ | ತರಬೇತಿ ನಡೆಯುವ ಕೇಂದ್ರಗಳು |
|---|---|---|---|---|
| 1 | 2018–19 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ತೃತೀಯ ವರ್ಷದ ಸ್ನಾತಕ ವಿದ್ಯಾರ್ಥಿಗಳಿಗೆ (ಬಿ.ಎ, ಬಿ.ಕಾಂ) | ಪ್ರಾಯೋಗಿಕ ಮತ್ತು ಸೈದ್ಧಾಂತಿಕ ತರಬೇತಿ | ಫೆಬ್ರುವರಿ, ಮಾರ್ಚ್, ಏಪ್ರಿಲ್, ಮತ್ತು ಮೇ–2022 | ಮೈಸೂರು, ಬೆಂಗಳೂರು, ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಉಡುಪಿ |
| 2 | 2018–19 ನೇ ಸಾಲಿನ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (ಎಂ.ಎ./ಎಂ.ಕಾಂ./ಎಂ.ಎಸ್ಸಿ/ಎಂ.ಬಿ.ಎ/ಬಿ.ಎಡ್) (ಮಾರ್ಚ್, ಏಪ್ರಿಲ್, ಮೇ–2021ರಲ್ಲಿ ತರಬೇತಿಯನ್ನು ಹಮ್ಮಿಕೊಂಡು ಮೈಸೂರು ಮತ್ತು ಬೆಂಗಳೂರು ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಸಿ ಇನ್ನುಳಿದ ಕೇಂದ್ರಗಳ ತರಬೇತಿಯನ್ನು ಕೋವಿಡ್‌ನ ಕಾರಣ ಮುಂದೂಡಲಾಗಿತ್ತು) | ಪ್ರಾಯೋಗಿಕ ತರಬೇತಿ | ಫೆಬ್ರುವರಿ, ಮಾರ್ಚ್, ಏಪ್ರಿಲ್, ಮತ್ತು ಮೇ–2022 | ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಉಡುಪಿ |
| 3 | 2019–20 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (ಎಂ.ಎ./ಎಂ.ಕಾಂ./ಎಂ.ಎಸ್ಸಿ/ಎಂ.ಬಿ.ಎ/ಬಿ.ಎಡ್) | ಪ್ರಾಯೋಗಿಕ ಮತ್ತು ಸೈದ್ಧಾಂತಿಕ ತರಬೇತಿ | ಫೆಬ್ರುವರಿ, ಮಾರ್ಚ್, ಏಪ್ರಿಲ್, ಮತ್ತು ಮೇ–2022 | ಮೈಸೂರು, ಬೆಂಗಳೂರು, ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಉಡುಪಿ |

ಈ ತರಬೇತಿ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವ ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ಸಂಭಾವನೆ, ಸ್ಥಳೀಯ ಭತ್ಯೆ, ಪ್ರಾಯೋಗಿಕ ತರಬೇತಿಯನ್ನು ನೀಡಲು ಬೇಕಾಗಿರುವ ಕಂಪ್ಯೂಟರ್‌ಗಳ ಬಾಡಿಗೆ ವೆಚ್ಚ, ಜನರೇಟರ್ ಬಾಡಿಗೆ ವೆಚ್ಚ, ಸೈದ್ಧಾಂತಿಕ ತರಗತಿಗಳನ್ನು ನಡೆಸಲು ಬೇಕಾಗುವ ಕೊಠಡಿಗಳ ಬಾಡಿಗೆ ವೆಚ್ಚ, ಶೈಕ್ಷಣಿಕ ಸಾಮಗ್ರಿಗಳ ವೆಚ್ಚ, ಕುಡಿಯುವ ನೀರಿನ ವೆಚ್ಚ, ಮೈಸೂರು ಕೇಂದ್ರದಿಂದ ಸಂಯೋಜನಾಧಿಕಾರಿಯು ಕೇಂದ್ರವಾರು ಭೇಟಿ ನೀಡಿ ತರಬೇತಿಯನ್ನು ಆಯೋಜಿಸಲು ಪ್ರಯಾಣ ವೆಚ್ಚ, ಹಾಗೂ ಇತರೆ ವೆಚ್ಚ, Sanitizer ವೆಚ್ಚ, ತರಬೇತಿಯನ್ನು ಯಶಸ್ವಿಯಾಗಿ ನಡೆಸಲು ಆಯಾ ಕೇಂದ್ರ ಅಥವಾ ಶಿಕ್ಷಣ ಸಂಸ್ಥೆಗಳಲ್ಲಿರುವ ಗುಮಾಸ್ತರು, ಸಂಯೋಜಕರು, ಸೇವಕರುಗಳ ಸಂಭಾವನೆ, ಹಾಗೂ ಇತರೆ ವೆಚ್ಚಗಳು ಸೇರಿ, ಮೇಲಿನ ಎಲ್ಲಾ ಕೇಂದ್ರಗಳಲ್ಲಿ ಈ ತರಬೇತಿ ಕಾರ್ಯಕ್ರಮವನ್ನು ನಡೆಸಲು ತಗಲುವ ಒಟ್ಟು ಅಂದಾಜು ವೆಚ್ಚ ರೂ. **15,46,275/- (ಹದಿನೈದು ಲಕ್ಷದ ನಲವತ್ತಾರು ಸಾವಿರದ ಎರಡುನೂರ ಎಪ್ಪತ್ತೈದು ರೂಪಾಯಿಗಳು ಮಾತ್ರ)** ಗಳಿಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಮೇಲ್ಕಂಡಂತೆ, ವಿವಿಧ ಕೇಂದ್ರಗಳಲ್ಲಿ ನಡೆಸಲು ಅನುಮೋದಿಸಲಾಯಿತು. 2019–20 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನಡೆಸುವಾಗ 2018–19 ನೇ ಸಾಲಿನ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಹ ನಡೆಸುವಂತೆ ತೀರ್ಮಾನಿಸಲಾಯಿತು.**

ಕುಲಸಚಿವರು ಕುಲಪತಿಗಳು

## ವಿಷಯ ಸಂಖ್ಯೆ: 20.12

**ವಿಷಯ :** ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.
**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15-12-2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ, **ಡಾ.ತೇಜಸ್ವಿ ನವಿಲೂರು,** ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ.ಹೇಮಲತಾ.ಆರ್.** ಇವರನ್ನು **ದಿನಾಂಕ:16.12.2021 ರಿಂದ** ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

**ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಡಾ.ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಹೇಮಲತಾ ಆರ್. ಇವರನ್ನು ದಿನಾಂಕ:16.12.2021 ರಿಂದ ಜಾರಿಗೆ ಬಂದಂತೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 20.13

ವಿಷಯ : ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:11–10–2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿರ್ವಹಣಾಶಾಸ್ತ್ರ ವಿಭಾಗದ ಅಧ್ಯಕ್ಷರಾಗಿದ್ದ, **ಡಾ.ರಾಜೇಶ್ವರಿ.ಹೆಚ್** ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ನಿರ್ವಹಣಾಶಾಸ್ತ್ರ ವಿಭಾಗದ **ಡಾ.ಮಹದೇವಮೂರ್ತಿ.ಸಿ.** ಪ್ರಾಧ್ಯಾಪಕರು ಇವರನ್ನು **ದಿನಾಂಕ:01.11.2021** ರಿಂದ ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಎರಡು ವರ್ಷ ಅಥವಾ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

**ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಡಾ.ರಾಜೇಶ್ವರಿ.ಹೆಚ್. ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಡಾ.ಮಹದೇವಮೂರ್ತಿ.ಸಿ. ಪ್ರಾಧ್ಯಾಪಕರು ಇವರನ್ನು ದಿನಾಂಕ:01.11.2021 ರಿಂದ ಜಾರಿಗೆ ಬಂದಂತೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 20.14

**ವಿಷಯ :** ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06–12–2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ, **ಪ್ರೊ..ಎ. ರಂಗಸ್ವಾಮಿ,** ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ **ಪ್ರೊ. ಡಿ.ನಾಗಣ್ಣ** ಇವರನ್ನು **ದಿನಾಂಕ:06.12.2021 ರಿಂದ** ವಿಭಾಗದ ಅಧ್ಯಕ್ಷರನ್ನಾಗಿ ಆವರ್ತನ ಪದ್ಧತಿ ಅನುಸಾರ ದಿನಾಂಕ:09.12.2021 ರಿಂದ 08.12.2023 ರವರೆಗೆ ಎರಡು ವರ್ಷಗಳ ಅವಧಿಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

**ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರೊ..ಎ. ರಂಗಸ್ವಾಮಿ, ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಡಿ.ನಾಗಣ್ಣ ಇವರನ್ನು ದಿನಾಂಕ:06.12.2021 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ಆವರ್ತನ ಪದ್ಧತಿ ಅನುಸಾರ ದಿನಾಂಕ:09.12.2021 ರಿಂದ 08.12.2023 ರವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 20.15

**ವಿಷಯ :** ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ, **ಡಾ.ಮಹದೇವ ಸ್ವಾಮಿ.ಪಿ.** ಸಹಾಯಕ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ.ಸುರ್ಮ** ಇವರನ್ನು **ದಿನಾಂಕ:05.04.2021 ರಿಂದ** ವಿಭಾಗದ ಅಧ್ಯಕ್ಷರನ್ನಾಗಿ ಆವರ್ತನ ಪದ್ಧತಿ ಅನುಸಾರ ದಿನಾಂಕ:05.04.2021 ರಿಂದ 04.04.2023 ರವರೆಗೆ ಎರಡು ವರ್ಷಗಳ ಅವಧಿಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ :**

**ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಡಾ.ಮಹದೇವ ಸ್ವಾಮಿ.ಪಿ. ಸಹಾಯಕ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಮನೋವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಸುರ್ಮ ಇವರನ್ನು ದಿನಾಂಕ:05.04.2021 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ಆವರ್ತನ ಪದ್ಧತಿ ಅನುಸಾರ ದಿನಾಂಕ:05.04.2021 ರಿಂದ 04.04.2023 ರವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 20.16

ವಿಷಯ : ಗಣಕ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾಗಿದ್ದ, **ಡಾ.ಮಹೇಶ.ಡಿ.ಎಮ್** ಸಹಾಯಕ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಗಣಕ ವಿಜ್ಞಾನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಶ್ರೀಮತಿ. ಸುನೀತ** ಇವರನ್ನು **ದಿನಾಂಕ:03.03.2021** ರಿಂದ ವಿಭಾಗದ ಅಧ್ಯಕ್ಷರನ್ನಾಗಿ ಆವರ್ತನ ಪದ್ಧತಿ ಅನುಸಾರ ದಿನಾಂಕ:01.03.2021 ರಿಂದ 28.02.2023 ರವರೆಗೆ ಎರಡು ವರ್ಷಗಳ ಅವಧಿಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

**ಗಣಕ ವಿಜ್ಞಾನ ಅಧ್ಯಯನ ವಿಭಾಗದ ಡಾ.ಮಹೇಶ.ಡಿ.ಎಮ್ ಸಹಾಯಕ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಗಣಕ ವಿಜ್ಞಾನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ. ಸುನೀತ ಇವರನ್ನು ದಿನಾಂಕ:03.03.2021 ರಿಂದ ವಿಭಾಗದ ಅಧ್ಯಕ್ಷರನ್ನಾಗಿ ಆವರ್ತನ ಪದ್ಧತಿ ಅನುಸಾರ ದಿನಾಂಕ:01.03.2021 ರಿಂದ 28.02.2023 ರವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

ಕುಲಸಚಿವರು.

ಕುಲಪತಿಗಳು

**ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**
**ವಿಷಯ ಸಂಖ್ಯೆ: 20.17**

**ವಿಷಯ** : CBCS ಮಾದರಿಯ ಸ್ನಾತಕೋತ್ತರ ಕಾರ್ಯಕ್ರಮಗಳ ಶಿಕ್ಷಣಕ್ರಮಗಳ ಪಠ್ಯಕ್ರಮ ಮತ್ತು PPR ಗಳನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ CBCS ಮಾದರಿಯ ಸ್ನಾತಕೋತ್ತರ ಕಾರ್ಯಕ್ರಮಗಳ ಈ ಕೆಳಕಂಡ ಶಿಕ್ಷಣಕ್ರಮಗಳನ್ನು ಪ್ರಾರಂಭಿಸುವ ಸಲುವಾಗಿ ರಚಿತವಾಗಿರುವ ಸಂಬಂಧಪಟ್ಟ ಅಧ್ಯಯನ ಮಂಡಳಿಯ ಸಭೆಗಳನ್ನು ನಡೆಸಿ, ಪಠ್ಯಕ್ರಮಗಳನ್ನು ಅನುಮೋದಿಸಿ ಸದರಿ ಶಿಕ್ಷಣಕ್ರಮಗಳ ಪಠ್ಯಕ್ರಮ, ಸಿದ್ಧಪಾಠ ಮತ್ತು PPR ಗಳನ್ನು ಸಿದ್ಧಪಡಿಸಿ, ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗದವರು ಸಲ್ಲಿಸಿರುತ್ತಾರೆ.

ಈ ಶಿಕ್ಷಣಕ್ರಮಗಳಿಗೆ ಯುಜಿಸಿಯಿಂದ ಮಾನ್ಯತೆ ಪಡೆಯುವ ಸಂಬಂಧ, UGC-DEB Portal ಗೆ upload ಮಾಡಬೇಕಾಗಿರುತ್ತದೆ. ಈ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ಕ್ರ.ಸಂ | ಸ್ನಾತಕೋತ್ತರ ಕಾರ್ಯಕ್ರಮಗಳು |
|---|---|
| 01 | **School of Humanitis (Master of Arts)**<br>Kannada, English, Hindi, Urdu, Sanskrit, |
| 02 | **School of Social Science (Master of Arts)**<br>History, Ancient history and Archelogy, Political Science, Economics, Sociology, Anthropology, Public Admistration, Jurnalism and Mass Communication, MTTM |
| 03 | **School of Commerce and Management**<br>M.Com, MBA |
| 04 | **Master of Science**<br>Mathmatics, Physics, Chemistry, Geography, Environmental Science, Psychology, Biotechnology, Microbiology, Biochemnistry, Clinical nutrition and Dietatics, Computer Science, Library and information science |

<u>ತೀರ್ಮಾನ</u> :

ಮೇಲ್ಕಂಡ ಎಲ್ಲಾ ಶಿಕ್ಷಣಕ್ರಮಗಳ ಪಠ್ಯಕ್ರಮ, ಸಿದ್ಧಪಾಠ ಮತ್ತು **PPR** ಗಳನ್ನು ಅನುಮೋದಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.18

ವಿಷಯ : CBCS-NEP ಮಾದರಿಯಲ್ಲಿ ಸ್ನಾತಕ ಕಾರ್ಯಕ್ರಮಗಳ ಶಿಕ್ಷಣಕ್ರಮಗಳ ಪಠ್ಯಕ್ರಮ ಮತ್ತು PPR ಗಳನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯದಲ್ಲಿ 2021–22 ನೇ ಸಾಲಿನಿಂದ ಎಲ್ಲಾ ಸಾಂಪ್ರದಾಯಕ ವಿಶ್ವವಿದ್ಯಾನಿಲಯಗಳಲ್ಲಿ NEP ಮಾದರಿಯಲ್ಲಿ ಸ್ನಾತಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದು, ಮುಂದಿನ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಹ NEP ಮಾದರಿಯಲ್ಲಿ ಸ್ನಾತಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, CBCS-NEP ಮಾದರಿಯಲ್ಲಿ ಸ್ನಾತಕ ಕಾರ್ಯಕ್ರಮಗಳ ಈ ಕೆಳಕಂಡ ಶಿಕ್ಷಣಕ್ರಮಗಳ ಪಠ್ಯಕ್ರಮ, ಸಿದ್ಧಪಾಠ ಮತ್ತು PPR ಗಳನ್ನು ಸಿದ್ಧಪಡಿಸಿ, ಶೈಕ್ಷಣಿಕ ಮಂಡಳಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಈ ಶಿಕ್ಷಣಕ್ರಮಗಳಿಗೆ ಯುಜಿಸಿಯಿಂದ ಮಾನ್ಯತೆ ಪಡೆಯುವ ಸಂಬಂಧ, UGC-DEB Portal ಗೆ upload ಮಾಡಬೇಕಾಗಿರುತ್ತದೆ. ಈ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ಕ್ರ.ಸಂ | ಸ್ನಾತಕ ಕಾರ್ಯಕ್ರಮಗಳು |
|---|---|
| 1 | Bachalor of Arts- BA |
| 2 | Bachalor of Commerce-B.Com |
| 3 | Bachalor of Education- B.Ed |
| 4 | Library and information science |
| 5 | BBA (Genaral), |

ತೀರ್ಮಾನ :

**ಮೇಲ್ಕಂಡ ಎಲ್ಲಾ ಶಿಕ್ಷಣಕ್ರಮಗಳ ಪಠ್ಯಕ್ರಮ, ಸಿದ್ಧಪಾಠ ಮತ್ತು PPR ಗಳನ್ನು ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.19

**ವಿಷಯ** : 2021–22 ನೇ ಸಾಲಿನ ದ್ವಿತೀಯ ಆವರ್ತನದ ಎಂ.ಬಿ.ಎ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಿಸುವ ಬಗ್ಗೆ.

****

ಕರಾಮುವಿಯಲ್ಲಿ ವಿವಿಧ ಶಿಕ್ಷಣಕ್ರಮಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುದ್ರಿತ ಪಾಠಗಳನ್ನು ವಿತರಿಸುತ್ತಿದ್ದು, ಇದರ ಬದಲಾಗಿ ಕೇವಲ ಸಿದ್ಧಪಾಠಗಳ ಸಾಫ್ಟ್ ಕಾಪಿ ಗಳನ್ನು ನಿಡುವುದರ ಬಗ್ಗೆ ಚರ್ಚೆಯಾಗಿದ್ದು, ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಿಸಿದ್ದಲ್ಲಿ ಮುಂದಿನ ಸೈಕ್ಷಣಿಕ ಸಾಲುಗಳಲ್ಲಿ ಮುದ್ರಣ ವೆಚ್ಚವನ್ನು ಕಡಿತಗೊಳಿಸಬಹುದು. ಎಂದು ಮಾನ್ಯ ಕುಲಪತಿಗಳು ಅಭಿಪ್ರಾಯಪಟ್ಟರು. 2021–22 ನೇ ಸಾಲಿನ ದ್ವಿತೀಯ ಆವರ್ತನದ ಎಂ.ಬಿ.ಎ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಿಸುವ ಮೂಲಕ ಮಾದರಿ ಯೋಜನೆ (Pilot Project) ಮಾಡಲು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**2021–22** ನೇ ಸಾಲಿನ ದ್ವಿತೀಯ ಆವರ್ತನದ ಎಂ.ಬಿ.ಎ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ, ಅರ್ಜಿ ಸಲ್ಲಿಸುವಾಗ ಮುದ್ರಿತ ಸಿದ್ಧಪಾಠ ಅಥವಾ ಸಿದ್ಧಪಾಠಗಳ ಸಾಫ್ಟ್ ಕಾಪಿ ಹೊಂದಿರುವ ಟ್ಯಾಬ್ ಎಂದು ಆಯ್ಕೆ ನೀಡಿ ಸಾಫ್ಟ್ ಕಾಪಿ ಹೊಂದಿರುವ ಟ್ಯಾಬ್ ಎಂದು ಆಯ್ಕೆ ಮಾಡುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಟ್ಯಾಬ್ ನೀಡಿ ಫೀಡ್‌ಬ್ಯಾಕ್ ಪಡೆದು ಅದರ ಆಧಾರದ ಮೇಲೆ ಮುಂದಿನ ಶೈಕ್ಷಣಿಕ ಸಾಲಿನಿಂದ ಇತರೆ ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಉಚಿತವಾಗಿ ಟ್ಯಾಬ್ ನೀಡುವ ಬಗ್ಗೆ ತೀರ್ಮಾನಿಸಲು ಅನುಮೋದಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.20

ವಿಷಯ : CBR Network Bangalore ಇವರ ಶೈಕ್ಷಣಿಕ ಸಹಕಾರದೊಂದಿಗೆ ಕರಾಮುವಿಯಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

* * * * *

CBR Network Bangalore ಇವರು ದಿನಾಂಕ: 02–04–2021 ರಂದು ಪ್ರಸ್ತಾವನೆ ಸಲ್ಲಿಸಿದ್ದು, ಅದರಲ್ಲಿ ಈ ಕೆಳಕಂಡ ಕಾರ್ಯಕ್ರಮವನ್ನು ಕರಾಮುವಿಯಲ್ಲಿ ಆರಂಭಿಸಲು ಸಹಕಾರ ಕೋರಿರುತ್ತಾರೆ.

1. Diploma in Early Chilhood care and Education

ಈ ಸಂಬಂಧ ಮಾನ್ಯ ಕುಲಪತಿಗಳು ದಿನಾಂಕ: 24–12–2021 ರಂದು ಶಿಕ್ಷಣಶಾಸ್ತ್ರ ವಿಭಾಗಕ್ಕೆ ಸದರಿ ಪ್ರಸ್ತಾವನೆಯನ್ನು ಪರಿಶಿಲಿಸಿ ಸಂಬಂಧಪಟ್ಟ ಅಧ್ಯಯನ ಮಂಡಳಿಯಲ್ಲಿ ಮಂಡಿಸಿ ಅಭಿಪ್ರಾಯ ನೀಡುವಂತೆ ತಿಳಿಸಿದ್ದು, ಅದರಂತೆ ದಿನಾಂಕ: 28–12–2021 ರಂದು ಶಿಕ್ಷಣಶಾಸ್ತ್ರ ವಿಭಾಗದ ಯುಜಿ ಅಧ್ಯಯನ ಮಂಡಳಿಯು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ Diploma in Early Chilhood care and Education ಆರಂಭಿಸಬಹುದೆಂದು ಸಭೆ ನಡೆಸಿ ಸಭಾ ನಡಾವಳಿ ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ). ಈ ಸಂಬಂಧ CBR Network Bangalore ಸಹಯೋಗದೊಂದಿಗೆ ಸದರಿ ಕಾರ್ಯಕ್ರಮಗಳನ್ನು ಕರಾಮುವಿಯಲ್ಲಿ ಆರಂಭಿಸಲು ಅನುಮೋದನೆ ಕೋರಿದೆ.

<u>ತೀರ್ಮಾನ</u> :

**CBR Network Bangalore** ಇವರ ಶೈಕ್ಷಣಿಕ ಸಹಕಾರದೊಂದಿಗೆ ಕರಾಮುವಿಯಲ್ಲಿ **Diploma in Early Chilhood care and Education** ಕಾರ್ಯಕ್ರಮವನ್ನು ಪ್ರಾರಂಭಿಸಲು ಅನುಮೋದಿಸಲಾಯಿತು. ಸದರಿ ಕಾರ್ಯಕ್ರಮಕ್ಕೆ ವಿಭಾಗದ ಮುಖ್ಯಸ್ಥರು ಸೂಚಿಸುವ ಅಧ್ಯಾಪಕರನ್ನು ನೋಡೆಲ್ ಅಧಿಕಾರಿಯೆಂದು ನೇಮಕ ಮಾಡಲು ತೀರ್ಮಾನಿಸಲಾಯಿತು. ಸದರಿ ನೋಡೆಲ್ ಅಧಿಕಾರಿಗಳು **ELSC monitor Committee** ಸಭೆ ನಡೆಸಿ ಕ್ರಮವಹಿಸಲು ತಿಳಿಸಲು ತೀರ್ಮಾನಿಸಲಾಯಿತು. **CBR Network Bangalore** ಸಂಸ್ಥೆಯನ್ನು **ELSC** ಎಂದು ಪರಿಗಣಿಸಲು ಕ್ರಮವಹಿಸಲು ಡೀನ್(ಅಧ್ಯಯನ ಕೇಂದ್ರ) ರವರಿಗೆ ತಿಳಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.21

**ವಿಷಯ** : ಎರಡನೇ ಅಖಿಲ ಭಾರತ ಮುಕ್ತ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಮ್ಮೇಳನ ಏರ್ಪಡಿಸುವ ಬಗ್ಗೆ.

****

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ಯುಜಿಸಿ ನಿಯಮಾವಳಿ UGC, ODL and OL 2020 ಅನ್ನು ಅಧಿಸೂಚನೆಗೊಳಿಸಿದ್ದು, ಅದರಂತೆ ಭಾರತದ ಎಲ್ಲಾ ಮುಕ್ತ ವಿಶ್ವವಿದ್ಯಾನಿಲಯಗಳು ಕ್ರಮವಹಿಸುತ್ತಿವೆ. ಪ್ರಸ್ತುತ, ಕೇಂದ್ರ ಸರ್ಕಾರದವರು New Education Policy-2020 ಅನ್ನು ಪ್ರಕಟಿಸಿದ್ದು, ಅದರಂತೆ ರಾಜ್ಯದ ಎಲ್ಲಾ ಸಾಂಪ್ರದಾಯಕ ವಿಶ್ವವಿದ್ಯಾನಿಲಯಗಳಲ್ಲಿ NEP ಮಾದರಿಯಲ್ಲಿ ಸ್ನಾತಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿರುತ್ತವೆ. ಅಲ್ಲದೆ ಕೋವಿಡ್–19 ಸಾಂಕ್ರಮಿಕ ರೋಗದಿಂದಾಗಿ ಯುಜಿಸಿ ನಿಯಮಾವಳಿ UGC, ODL and OL 2020 ಗಳನ್ನು ಸಂಪೂರ್ಣವಾಗಿ ಪಾಲಿಸಲು ಕಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತದ ಎಲ್ಲಾ ಮುಕ್ತ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಮ್ಮೇಳನ ಏರ್ಪಡಿಸಿ ಯುಜಿಸಿಯ ದೂರ ಶಿಕ್ಷಣ ವಿಭಾಗದ ಮುಖ್ಯಸ್ಥರನ್ನು ಆಹ್ವಾನಿಸಿ ಯುಜಿಸಿ ನಿಯಮಾವಳಿ UGC, ODL and OL 2020 ಗಳಲ್ಲಿ ತರಬಹುದಾದ ಸುಧಾರಣೆಗಳ ಬಗ್ಗೆ ಚರ್ಚಿಸುವುದು ಸೂಕ್ತವಾಗಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

**ಎರಡನೇ ಅಖಿಲ ಭಾರತ ಮುಕ್ತ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಸಮ್ಮೇಳನ ಏರ್ಪಡಿಸಲು ಅನುಮೋದಿಸಲಾಯಿತು. ಬೇರೆ ಬೇರೆ ಸ್ಥಳಗಳಿಂದ ವಿಮಾನದ ಮೂಲಕ ಆಗಮಿಸುವ ಯುಜಿಸಿಯ ಅಧಿಕಾರಿಗಳು ಹಾಗೂ ವಿವಿಧ ಮುಕ್ತ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಅನುಕೂಲಕ್ಕಾಗಿ ಸದರಿ ಸಮ್ಮೇಳವನ್ನು ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 20.22

**ವಿಷಯ:** ಪರೀಕ್ಷಾ ವಿಭಾಗದ ವಿದ್ಯಾರ್ಥಿಗಳ ಕುಂದುಕೊರತೆಗಳ ಸಲಹಾ ಸಮಿತಿಯ ನಡವಳಿಯನ್ನು 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಒಪ್ಪಿಗೆ ಕೋರಿ ಮರು ಮಂಡಿಸುತ್ತಿರುವ ಬಗೆಗೆ.

*****

ಪರೀಕ್ಷಾ ವಿಭಾಗದ ವಿದ್ಯಾರ್ಥಿಗಳ ಕುಂದುಕೊರತೆಗಳ ಸಲಹಾ ಸಮಿತಿ ಸಭೆಯ ನಿರ್ಣಯವನ್ನು ದಿನಾಂಕ:15.11.2021ರಂದು ನಡೆದ 58ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು, ಸದರಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ/ಪರಿಶೀಲಿಸಿ ಮಂಡಿಸಿರುವ ವರದಿಯಲ್ಲಿ ಇನ್ನೂ ಹೆಚ್ಚಿನ ಸ್ಪಷ್ಟತೆಯ ಅವಶ್ಯಕತೆ ಇರುವುದರಿಂದ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಶೈಕ್ಷಣಿಕ ಮಂಡಳಿ ಸಭೆಗೆ ಮರು ಮಂಡಿಸಲು ಸೂಚಿಸಲಾಗಿತ್ತು ಎಂಬ ಅಂಶವನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರಲಾಗಿದೆ.

ಈ ಹಿನ್ನಲೆಯಲ್ಲಿ, ಪರೀಕ್ಷಾ ವಿಭಾಗದಲ್ಲಿ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ಬಗೆಹರಿಸುವ ಹಿತದೃಷ್ಟಿಯಿಂದ ರಚಿಸಲಾಗಿರುವ ಸಲಹಾ ಸಮಿತಿ ಸಭೆಯು ದಿನಾಂಕ:02.02.2022 ರಂದು ಮಾನ್ಯ ಕುಲಸಚಿವರು(ಪರೀಕ್ಷಾಂಗ)ರವರ ಅಧ್ಯಕ್ಷತೆಯಲ್ಲಿ ನಡೆದಿರುತ್ತದೆ, ಸಭೆಯಲ್ಲಿ ಮಂಡಿಸಲಾಗಿದ್ದ ಸ್ನಾತಕ 18 ವಿಷಯಗಳು ಸ್ನಾತಕೋತ್ತರ 05 ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿ ವಿವರವಾದ ಪರಿಷ್ಕೃತ ವರದಿಯನ್ನು ಸಿದ್ದಪಡಿಸಲಾಗಿದ್ದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಮಿತಿಯು ತೆಗೆದುಕೊಂಡಿರುವ ನಿರ್ಣಯದ ವರದಿಯನ್ನು ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ :

**ದಿನಾಂಕ:02.02.2022 ರಂದು ಮಾನ್ಯ ಕುಲಸಚಿವರು(ಪರೀಕ್ಷಾಂಗ)ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಸಲಹಾ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದ ಸ್ನಾತಕ 18 ವಿಷಯಗಳು ಸ್ನಾತಕೋತ್ತರ 05 ವಿಷಯಗಳಿಗೆ ಸಂಬಂಧಿಸಿದ ಅಂಶಗಳ ವಿವರವಾದ ಪರಿಷ್ಕೃತ ವರದಿಯನ್ನು ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

ಅಂತಿಮವಾಗಿ 20ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು